
A Jain Institution
Sitadevi Ratanchand Nahar
ADARSH EVENING COLLEGE
(Affiliated to Bengaluru City University)

# CAMPUS ಕಲರವ

## ಮೊದಲ ಸಂಚಿಕೆ – ಆಗಸ್ಟ್ 2025







**ಪೂಜ. ಸಿ. 1ನೇ ಬಿ.ಕಾಂ**

ನನಗೆ ಕಾಲ ಕಳೆಯುವುದು ಹೇಗೆಂಬ ಚಿಂತೆಗಿಂತ ಕಾಲ ಕಳೆದು ಹೋಗುತ್ತದಲ್ಲಾ ಎನ್ನುವುದೇ ಚಿಂತೆ.

**– ಕೆ.ಪಿ. ಪೂರ್ಣಚಂದ್ರ ತೇಜಸ್ವಿ,** ಪರಿಸರದ ಕತೆ



## ಮೊದಲ ಸಂಚಿಕೆ – ಆಗಸ್ಟ್ 2025



ಶ್ರೀರಕ್ಷಾ. ಬಿ.ಎಸ್. 1ನೇ ಬಿ.ಕಾಂ

### ಮಾರಿಗೆ ಬಲಿಯಾದ ಮಾದಪ್ಪನ ಕೋಣ

ನಮ್ಮ ಊರು ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನ ರಾಂಪುರ ಗ್ರಾಮ. ನಾನು ಸುಮಾರು ಮೂವತ್ತು ವರ್ಷ ಇಲ್ಲಿಯೇ ಕಳೆದೆ. ನಮ್ಮ ಮನೆಗೆ ಮಾದಪ್ಪ ಖಾಯಂ ಅತಿಥಿ ಯಾಗಿದ್ದ. ನಮ್ಮ ಮನೆಯ ಬಹುತೇಕ ಕೆಲಸಗಳನ್ನು ಮಾಡುತ್ತಿದ್ದ. ತೋಟದ ಕಾರ್ಯ ಹೊಲದ ಕೆಲಸಗಳು ಅವನಿಲ್ಲದೆ  ಆಗುತ್ತಿರಲಿಲ್ಲ. ಮಾದಪ್ಪನಿಗೆ ಐದು ಜನ ಮಕ್ಕಳು, ಒಬ್ಬ ಗಂಡು ಮಗ ಉಳಿದವರು ಹೆಣ್ಣು ಮಕ್ಕಳು. ದೊಡ್ಡ ಮಗಳಿಗೆ ಮದುವೆ ಆಗಿತ್ತು. ಮಗ ಹಾಸನದ ಮೀನುಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡುತಿದ್ದ. ಮಾದಪ್ಪ ಕಾಂಗ್ರೆಸ್ ಪಕ್ಷದ ಕಟ್ಟಾ ಬೆಂಬಲಿಗ ಆಗಿದ್ದ ಅಲ್ಲದೆ ಬೇರೆ ಪಕ್ಷದವರನ್ನು ಕುಡಿದಾಗಲೆಲ್ಲಾ ಬಾಯಿಗೆ ಬಂದಂತೆ ಬಯ್ಯುತಿದ್ದ ಅದಕ್ಕೆ ಬಹಳಷ್ಟು ಊರಿನ ಜನರಿಂದ ಹೊಡೆತ ತಿಂದಿದ್ದ. ಮಾದಪ್ಪ ಮಗನಿಗೆ ಕೆಲ್ಸ ಸಿಕ್ಕಿದ್ದಕ್ಕೆ, ಮಗಳಿಗೆ ಮದುವೆಯಾಗಿದ್ದಕ್ಕೆ ಹೊಳಲ್ಕೆರೆ ಅಮ್ಮನಿಗೆ ಕೋಣ ಬಲಿ ಕೊಡುವ ಹರಕೆ ಮಾಡಿಕೊಂಡಿದ್ದ. ಅದಕ್ಕಾಗಿ ಒಂದು ಕೋಣದ ಮರಿಯನ್ನು ಸಾಕಿಕೊಂಡಿದ್ದ. ಮಾದಪ್ಪ ಕೋಣ ಮೇಯಿಸಲು ನಮ್ಮ ತೋಟಕ್ಕೆ ಬರುತಿದ್ದ. ಈ ಸಂದರ್ಭದಲ್ಲಿ ನಾನು ಅವನನ್ನು ನೀನು ಯಾವಾಗ ಅಮ್ಮನಿಗೆ ಕೋಣ ಬಲಿ ಕೊಡುವುದು ಎಂದು ಕೇಳಿದೆ. ಅದಕ್ಕೆ ಅವನು ಇನ್ನೂ ಸಮಯ ಬಂದಿಲ್ಲ ಎಂದು ಹೇಳಿದ. ನಾನು ನೋಡು ಮಾದಪ್ಪ ಅದು ನಿನ್ನನ್ನು ಅಷ್ಟು ಪ್ರೀತಿಸುತ್ತದೆ. ನೀನು ಇಲ್ಲದೆ ಅದು ಒಂದು ಕ್ಷಣವೂ ಇರುವುದಿಲ್ಲ, ನಿನ್ನನ್ನು ನೋಡಿದ ಕೂಡಲೇ ವರಲುತ್ತದೆ.ನಿನ್ನ ಹಿಂದೆಯೇ ಸದಾ ಇರುತ್ತದೆ. ನೀನು ಅದನ್ನು ಅಮ್ಮನಿಗೆ ಬಲಿ ಕೊಟ್ಟರೆ ಅದು ನಂಬಿಕೆ ದ್ರೋಹ ಮಾಡಿದಂತೆ. ಬಲಿ ಕೊಡುವ ಬದಲು ಕೋಣವನ್ನು ಮಾರಿ ಅದೇ ದುಡ್ಡನ್ನು ಅಮ್ಮನಿಗೆ ಕಾಣಿಕೆ ಕೊಡು ಎಂದು ಹೇಳಿದೆ. ಅದಕ್ಕೆ ಮಾದಪ್ಪ ಯಾವುದಕ್ಕೂ ಅಮ್ಮನ ಅಪ್ಪಣೆ ಪಡೆಯಬೇಕು ಎಂದು ಹೇಳಿ ಅಮ್ಮನ ಗುಡಿಗೆ ಹೋಗಿ ಮಾದಪ್ಪ ಅಪ್ಪಣೆ ಕೇಳಿದ್ದಾನೆ. ಆದರೆ ಅಪ್ಪಣೆ ಆಗಲಿಲ್ಲ. ಈ ವಿಷಯವನ್ನು ನನಗೆ ತಿಳಿಸಿದ ಅಲ್ಲದೆ, ಅಮ್ಮನ ಗುಡಿಯ ಪೂಜಾರಿ ಮಾದಪ್ಪನಿಗೆ ನೀನು ಕೋಣವನ್ನು ಬಲಿ ಕೊಡದೆ ಮಾರಿದರೆ ಒಂದಕ್ಕೆ ಎರಡು ಕೋಣವನ್ನು ಕೊಡಬೇಕಾದ ಪರಿಸ್ಥಿತಿ ಬರಬಹುದು ಎಂದು ಮಾದಪ್ಪನನ್ನು ಬೆದರಿಸಿ ಕಳುಹಿಸಿದ್ದ. ಮಾದಪ್ಪ ಮತ್ತೆ ತನ್ನ ಕೋಣದ ಜೊತೆಯಲ್ಲಿ ನಮ್ಮ ತೋಟದಲ್ಲಿ ಸಿಕ್ಕಿದ. ಮಾದಪ್ಪ ಮತ್ತು ಕೋಣದ ಸ್ನೇಹ ಮತ್ತಷ್ಟೂ ಗಟ್ಟಿಯಾಗಿತ್ತು. ಕೋಣ ಮತ್ತಷ್ಟೂ ಮೈತುಂಬಿಕೊಂಡಿತ್ತು. ಅವನನ್ನು ಕೋಣ ಬಲಿ ಕೊಡುವ ವಿಚಾರ ಎಲ್ಲಿಗೆ ಬಂತು ಎಂದು ನಾನು ಕೇಳಿದೆ, ಅದಕ್ಕೆ ಅವನು ಅಮ್ಮನ ಗುಡಿಯಲ್ಲಿ ನಡೆದ ಘಟನೆಯನ್ನು ಹೇಳಿದ. ಈ ವಿಷಯ ಮಾದಪ್ಪನ ಹಟ್ಟಿಯಲ್ಲಿ ಹೇಗೋ ಎಲ್ಲಾರಿಗೂ ತಲುಪಿತು. ಅವರು ಮಾದಪ್ಪ ನೀನು ಏನು ಹರಕೆ ಮಾಡಿಕೊಂಡಿದ್ದಿಯಾ ಅದರಂತೆ ಕೋಣವನ್ನು ಬಲಿ ಕೊಡು ಎಂದು ಮಾದಪ್ಪನಿಗೆ ಸೂಚಿಸಿದರು. ಇದರ ಮಧ್ಯೆ ಹಟ್ಟಿಯ ಜನ ಮಾದಪ್ಪನ ಮಗನಿಗೆ ಈ ವಿಚಾರ ತಿಳಿಸಿದರು. ಅವನು ಒಂದು ದಿನ ಬಂದು ಕೋಣವನ್ನು ಬಲಿ ಕೊಡುವ ವ್ಯವಸ್ಥೆ ಮಾಡಿಯೇಬಿಟ್ಟ. ಅದು ಕೋವಿಡ್ ಸಮಯವಾಗಿತ್ತು, ನಾವು ಹೊಲದಿಂದ ಹೆಸರು ಸೊಪ್ಪು ಕಿತ್ತು ರಸ್ತೆಗೆ ಹಾಕಿದ್ದೆವು. ನಮ್ಮ ಕಣದ ಕೆಲಸಕ್ಕೆ ಬಂದಿದ್ದಹಟ್ಟಿಯ ಬಸಪ್ಪನ ಹೆಂಡತಿ ನಮಗೆ ಮಾದಪ್ಪನ ಕೋಣವನ್ನು ಬಲಿ ಕೊಟ್ಟ ವಿಚಾರವನ್ನು ಹೇಳಿದಳು. ಅವಳ ಪ್ರಕಾರ ಅಂದು ಇಡೀ ಹಟ್ಟಿ ಸಂಭ್ರಮದಿಂದ ಕೂಡಿತ್ತು, ಕಾರಣ ಸುಮಾರು ಐದು ವರ್ಷದ ಕೋಣವನ್ನು ಬಲಿ ಕೊಡುವ ವ್ಯವಸ್ಥೆ ಆಗಿತ್ತು. ಅಂದು ಮಾದಪ್ಪ ಬೆಳಗ್ಗೆ ಬೇಗ ಎದ್ದು, ಕೋಣವನ್ನು ಮೈ ತೊಳೆದು ಅದಕ್ಕೆ ಹೋಳಿಗೆ ತಿನ್ನಿಸಿದ್ದ. ಕೋವಿಡ್ ಕಾಲವಾದ್ದರಿಂದ ಹೊಳಲ್ಕೆರೆ ಅಮ್ಮನ ದೇವಾಲಯದ ಬಳಿ ಕೋಣ ಕಡಿಯಲು ಅವಕಾಶವಿರಲಿಲ್ಲ. ಅದಕ್ಕೆ ಹಟ್ಟಿಯ ಜನರು ಹಟ್ಟಿಯಲ್ಲಿರುವ ಈಚಲು ಮರಕ್ಕೆ ಗಿಂಡಿ ಪೂಜೆ ಮಾಡಿ ಕೋಣವನ್ನು ಬಲಿ ಕೊಡುವ ವ್ಯವಸ್ಥೆ ಮಾಡಿದ್ದರು. ಸುಮಾರು ಮಧ್ಯಾಹ್ನ ಒಂದು ಘಂಟೆಯ ಸಮಯಕ್ಕೆ ಕೋಣವನ್ನು ಮಾದಪ್ಪ ಹಟ್ಟಿಯ ಹುಡುಗರ ಕೈಗೆ ಕೊಟ್ಟಿದ್ದ.ಅವರು ಕೋಣವನ್ನು ಈಚಲು ಮರದ ಪಕ್ಕದಲ್ಲಿರುವ ಸಬಾಬುಲ್ಲಿನ ಮರಕ್ಕೆ ಕೋಣದ ತಲೆಯನ್ನು ಬಿಗಿಯಾಗಿ ದೊಡ್ಡ ಹಗ್ಗದಿಂದ ಕಟ್ಟಿದ್ದಾರೆ. ಅದಕ್ಕೆ ತಲೆ ಅಲ್ಲಾಡಿಸಲು ಬಿಟ್ಟಿಲ್ಲ. ಅಲ್ಲದೆ ಕೋಣದ ಹೊಟ್ಟೆಗೆ ಮರದ ದಿಮ್ಮಿಗಳಿಂದ ಬಿಗಿಯಾಗಿ ಹಿಡಿದಿದ್ದಾರೆ. ಹಿಂದಿನಿಂದ ಕೋಣದ ಬಾಲವನ್ನು ಎಳೆದು ಹಿಡಿದ್ದಿದ್ದಾರೆ. ಕೋಣ ಕಡಿಯುವ ಜವಾಬ್ದಾರಿಯನ್ನು ಮಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಜಿಮ್ಗೆ ಹೋಗಿ ದಷ್ಟಪುಷ್ಟವಾಗಿದ್ದ ಪವನನಿಗೆ  ವಹಿಸಿದ್ದರು. ಅವನು ಸುಮಾರು ಮೂರರಿಂದ ನಾಲ್ಕು ಕಚ್ಚಿಗೆ ಕೋಣವನ್ನು ಕಡಿದಿದ್ದಾನೆ. ಕಡಿದ ನಂತರ ಸುಮಾರು ಒಂದು ಘಂಟೆ ರುಂಡ ಮತ್ತು ಮುಂಡವನ್ನ ಯಾರೂ ಮುಟ್ಟಿಲ್ಲಾ. ಅನಂತರ ಮಧ್ಯೆ ರಾತ್ರಿ ವೇಳೆಗೆ ಸುಮಾರು ಐದು ನೂರು ಜನ ಮಾದಪ್ಪನ ಕೋಣವನ್ನು ಊಟ ಮಾಡಿ ಮುಗಿಸಿದ್ದಾರೆ. ಮಾದಪ್ಪ ಸಿಕ್ಕಿದಾಗ ಎಲ್ಲಾ ವಿಷಯಗಳನ್ನು ತಿಳಿಸಿದ. ನಾನು ಏನು ಮಾಡಲು ಸಾಧ್ಯವಾಗಲಿಲ್ಲ, ಹಟ್ಟಿಯ ಎಲ್ಲರೂ ಸೇರಿ ನನ್ನ ಮಗನ ಮೂಲಕ ಕೋಣವನ್ನು ಅಮ್ಮನಿಗೆ ಬಲಿ ಕೊಡಿಸಿದರು. ನಾನು ಈ ವಿಚಾರದಲ್ಲಿ ಮೂಕಪ್ರೇಕ್ಷಕ ಆಗಿದ್ದೆ ಎಂದ. ನನ್ನ ಎಲ್ಲಾ ಅಹಿಂಸೆ, ವೈಚಾರಿಕ ವೈಜ್ಞಾನಿಕ ವಿಚಾರಗಳು ನಮ್ಮೂರ ಹಳ್ಳದಲ್ಲಿ ಕೊಚ್ಚಿ ಹೋಗಿದ್ದವು. ಈ ಭೂಮಿ ನಿರ್ಮಾಣವಾಗಿ 450 ಕೋಟಿ ವರ್ಷಗಳಾಗಿವೆ. ಭೂಮಿಯ ಮೇಲೆ ಮೊದಲ ಜೀವಿ ಕಾಣಿಸಿಕೊಂಡು 350 ಕೋಟಿ ವರ್ಷಗಳು ಆಗಿವೆ ಅಂತೆ. ಮನುಷ್ಯ ಭೂಮಿಯ ಮೇಲೆ ಕಾಣಿಸಿಕೊಂಡು ಮೂರು ಲಕ್ಷ ವರ್ಷವಂತೆ. ಮನುಷ್ಯ ವ್ಯವಸಾಯ ಮಾಡಲು ಪ್ರಾರಂಭಿಸಿದ್ದು ಹದಿಮೂರು ಸಾವಿರ ವರ್ಷಗಳ ಹಿಂದೆ. ಅದಕ್ಕೂ ಮುಂಚೆ ಸುಮಾರು ಎರಡು ಲಕ್ಷದ ಎಂಬತ್ತೇಳು ಸಾವಿರ ವರ್ಷಗಳ ಕಾಲ ಮನುಷ್ಯನ ಅಹಾರ ಬೇಟೆಯಿಂದ ಬಂದ ಮಾಂಸವೇ ಅಹಾರ ಆಗಿತ್ತು. ಶಾಲೆಗೆ ಹೋಗದ ಮಾದಪ್ಪ ಮಾರಿಗೆ ಕೋಣವನ್ನು ಬಲಿ ಕೊಡುವ ಮೂಲಕ ನನಗೆ ಲಕ್ಷಾಂತರ ವರ್ಷಗಳ ಮಾನವನ ಅಹಾರ ವ್ಯವಸ್ಥೆ ಬಗ್ಗೆ ಪರೋಕ್ಷವಾಗಿ ಪಾಠಮಾಡಿದ್ದ.

– **ಪ್ರೊ. ಶಿವಾನಂದ ಸ್ವಾಮಿ,** ರಾಜ್ಯಶಾಸ್ತ್ರ ವಿಭಾಗ

# ಮೊದಲ ಸಂಚಿಕೆ – ಆಗಸ್ಟ್ 2025



ಭುವನೇಶ್ವರಿ 1ನೇ ಬಿ.ಕಾಂ

## ಸಂಜೆ ಕಾಲೇಜಿನ ಅನುಭವ

ಕಾಲೇಜು ಎಂದರೆ ಎಲ್ಲರಿಗೂ ಒಂದು ಸುಂದರವಾದ ನೆನಪು. ಮನಸ್ಸಿಗೆ ಮುದ ನೀಡುವ, ಬೇಸಿಗೆಯಲ್ಲಿ ಬೀಸುವ ಹಿತವಾದ ತಂಗಾಳಿಯ ಹಾಗೆ... ಈ ಅನುಭವ ಪ್ರತಿಯೊಬ್ಬರಿಗೂ ತಮ್ಮ ಜೀವನದಲ್ಲಿ ಅನುಭವಿಸಿರುತ್ತಾರೆ. ಹೈಸ್ಕೂಲಿನವರೆಗೆ ಕುದುರೆಗೆ ಕಟ್ಟಿದ ನೇರ ದೃಷ್ಟಿಯಂತೆ ಆಗಿರುತ್ತದೆ, ಕಾಲೇಜಿನಲ್ಲಿ ಸ್ವತಂತ್ರದ ಅನುಭವವಾಗುತ್ತದೆ. ಮನುಷ್ಯ ಸ್ವತಂತ್ರವಾಗಿರಲು ಬಯಸುತ್ತಾನೆ. ಅದಕ್ಕಾಗಿಯೇ ಕಾಲೇಜಿನ ದಿನಗಳನ್ನು ಬಂಗಾರದ ದಿನಗಳು ಎಂದು ಕರೆಯುತ್ತಾರೆ.

ಆದರೆ ನಿಜವಾಗಿಯೂ ಹೇಳಬೇಕೆಂದರೆ ನಮ್ಮ ಸಂಜೆ ಕಾಲೇಜಿನಲ್ಲಿ ಬೆಳಗಿನ ಕಾಲೇಜುಗಳಷ್ಟು ಗಿಜಿಗಿಜಿ, ಗಲಾಟೆ, ತಲೆಹರಟೆ, ಕೂಗಾಟ, ರೇಗಿಸೋರು ಇಲ್ಲದೆ ಇದ್ದರೂ ಅದೊಂಥರಾ ಮೌನದ ನಡುವಿನ ಮಾತಿನಂತೆ. ಇದು ಸುಮ್ಮನೆ ಪುಟ ತುಂಬಿಸಲು ಬರೆದಿರುವ ಸಾಲುಗಳಲ್ಲ, ಇದು ನನ್ನ ಮನಸ್ಸಿನ ಮಾತು... ಅದು ಪದಗಳಲ್ಲಿ ಹೊರಹೊಮ್ಮುತ್ತಿದೆ. ಕಾಲೇಜಿನ ಮುಂದಿರುವ ಚಿಕ್ಕದಾದ ಚೊಕ್ಕದಾದ ಉದ್ಯಾನವನ, ಅಲ್ಲಿರುವ ದೀಪಗಳು, ದೀಪದ ಪಕ್ಕದಲ್ಲಿರುವ ಆಸನಗಳು ನಮಗೆ ಸ್ವಾಗತ ಕೋರುವಂತಿವೆ.

ಇನ್ನು ಗಂಭೀರ ನಡೆಯ ಮೃದು ಸ್ವಭಾವದ, ಮೃದು ಮನಸ್ಸಿನ, ಸ್ನೇಹಪರರಾದ ನಮ್ಮ ಪ್ರಾಂಶುಪಾಲರು, ಎಲ್ಲಾ ಶಿಕ್ಷಕ ವೃಂದದವರು ನಮಗೆ ಪಾಠದ ಜೊತೆಗೆ ಸಾಮಾಜಿಕವಾಗಿ ನಾವು ಹೇಗಿರಬೇಕು ಎನ್ನುವುದನ್ನು ತಿಳಿಸುತ್ತಾರೆ. ಇತ್ತೀಚೆಗೆ ನಡೆದ ಹಳೆಯ ವಿದ್ಯಾರ್ಥಿಗಳ ಸಭೆ ಕೂಡ ಚೆನ್ನಾಗಿತ್ತು. ಹಿಂದಿನ ಪ್ರಾಂಶುಪಾಲರು ಹೇಳಿದ ವಿಷಯಗಳು, ನಮ್ಮ ಹಿರಿಯ ವಿದ್ಯಾರ್ಥಿಗಳು ತಿಳಿಸಿದ ಕೆಲವು ವಿಚಾರಗಳು ನಮಗೆ ಮಾರ್ಗದರ್ಶನವಾಯಿತು. ಪರಸ್ಪರ ವಿಷಯ ವಿನಿಮಯ ಕುತೂಹಲಕರವಾಗಿತ್ತು.

ಕಾಲೇಜಿಗೆ ಬರುವುದೆಂದರೆ ಏನೋ ಒಂದು ರೀತಿಯ ಸಂತೋಷ. ಸ್ನೇಹಿತರ ಭೇಟಿ, ಕಾಲೇಜಿನ ತರಗತಿಗಳು, ಪ್ರಾಧ್ಯಾಪಕರೊಂದಿಗೆ ಪಠ್ಯ ವಿಚಾರ ವಿನಿಮಯ, ಪಠ್ಯ ಮತ್ತು ಪಠ್ಯೇತರ, ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳು, ಶಿಕ್ಷಕ ವೃಂದ, ಗೆಳೆಯ–ಗೆಳತಿಯರ ಬಳಗ ಎಲ್ಲವೂ ಮನಸ್ಸಿಗೆ ಮುದ ನೀಡುತ್ತದೆ. ಎಲ್ಲದರಲ್ಲಿಯೂ ಹೊಸರೀತಿಯ ಅನುಭವ. ನಿಮಗೆ ಏನನ್ನಿಸಿತು.. ನನ್ನ ಮಾತು ನಿಜಾ ತಾನೆ..?!

ದಿನವೆಲ್ಲಾ ಆಯಾಸ
ಕಾಲೇಜಿಗೆ ಹೋಗುವುದೇ ಒಂದು ಪ್ರಯಾಸ
ಆದರೂ ಮನಸ್ಸಿಗಿಲ್ಲ ನೀರಸ
ಅಲ್ಲಿ ಕಲಿಯುವುದಿಲ್ಲ ಪ್ರಾಸ–ಸಮಾಸ
ಅಲ್ಲಿದೆ ಮನಸ್ಸಿಗೆ ಹಿತವಾದ ಸ್ನೇಹ–ಮಂದಹಾಸ..

– **ಶಾಲಿನಿ ಬಿ. ಎ. ಅಂತಿಮ ಬಿ. ಕಾಂ.**